**8. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಹಾಗೂ ಇತರೇ ಮೀಸಲಾತಿ ಗುಂಪಿನ ಅಭ್ಯರ್ಥಿಗಳ ಪ್ರವೇಶದ ಬಗ್ಗೆ ಸೂಚನೆಗಳು :-**

1) ಸರ್ಕಾರದ ಆದೇಶ ಸಂಖ್ಯೆ: ಇಡಿ 114 ಟಿಪಿಇ 87 ದಿನಾಂಕ: 20/7/1987ರ ನಿಯಮ 5(2ಎ)ರಲ್ಲಿ ತಿಳಿಸಿರುವಂತೆ, ಕರ್ನಾಟಕ ಅಭ್ಯರ್ಥಿಗಳಿಗೆ ಮೀಸಲಾದ **ಶೇಕಡ 80** ಸ್ಥಾನಗಳಲ್ಲಿ ಕನಿಷ್ಠ **ಶೇ.20**ರಷ್ಟು ಪರಿಶಿಷ್ಟ ಜಾತಿ (ಎಸ್.ಸಿ) ಮತ್ತು **ಶೇ.5**ರಷ್ಟು ಪರಿಶಿಷ್ಟ ಪಂಗಡ (ಎಸ್.ಟಿ) ಅಭ್ಯರ್ಥಿಗಳಿಗೂ ಮೀಸಲಾಗಿರಿಸತಕ್ಕದ್ದು. ಈ ಮೀಸಲಾತಿಯ ಅಭ್ಯರ್ಥಿಗಳು ಸೂಕ್ತ ಸಂಖ್ಯೆಯಲ್ಲಿ ಬಾರದಿದ್ದಲ್ಲಿ, ಈ ಬಗ್ಗೆ ತೆಗೆದುಕೊಂಡಿರುವ ಕ್ರಮದಲ್ಲಿ ಸಂಬಂಧಿಸಿದ ದಾಖಲೆಗಳೊಂದಿಗೆ (ಉದಾ: ಪತ್ರಿಕಾ ಪ್ರಕಟಣೆ ಇತ್ಯಾದಿ) ನಿರ್ದೇಶನಾಲಯಕ್ಕೆ ಮುಂಚಿತವಾಗಿ ಲಿಖಿತ ರೂಪದಲ್ಲಿ ತಿಳಿಸಿ, ನಿರ್ದೇಶಕರ ಪೂರ್ವಾನುಮತಿ ಪಡೆದು ಸಾಮಾನ್ಯ ವರ್ಗದ ಕರ್ನಾಟಕದ ಅಭ್ಯರ್ಥಿಗಳಿಗೆ ಪ್ರವೇಶ ನೀಡಬಹುದಾಗಿದೆ. ಆದಾಗ್ಯೂ, ಇದನ್ನೇ ಉದಾಹರಣೆಯಾಗಿ ತೆಗೆದುಕೊಂಡು ಸಾಮಾನ್ಯ ವರ್ಗದ ಕರ್ನಾಟಕದ ಅಭ್ಯರ್ಥಿಗಳಿಗೆ ಪ್ರವೇಶ ನೀಡಬಹುದೆಂದು ಹಕ್ಕು ಚಲಾಯಿಸುವಂತಿಲ್ಲ. ಅಷ್ಟು ಪ್ರಮಾಣದ ಸ್ಥಾನಗಳನ್ನು ಖಾಲಿ ಬಿಟ್ಟು ಉಳಿದ ಸ್ಥಾನಗಳನ್ನು ತುಂಬುವುದು. ನಂತರ ಈ ವಿಷಯದಲ್ಲಿ ನಿರ್ದೇಶನಾಲಯಕ್ಕೆ ಪ್ರಸ್ತಾವನೆ ಸಲ್ಲಿಸಿ ಮುಂದಿನ ಕ್ರಮದ ಬಗ್ಗೆ ಅನುಮೋದನೆ ಪಡೆಯತಕ್ಕದ್ದು.

2) ಸರ್ಕಾರದ ಆದೇಶ ಸಂ. ಹಿಂವಕ 148 ಬಿಸಿಎ 2015, ದಿನಾಂಕ:04-06-2015ರಲ್ಲಿ ಮೀಸಲಾತಿ ಸೌಲಭ್ಯ ಪಡೆಯುವ ಸಂಬಂಧದ ವಾರ್ಷಿಕ ಆದಾಯ ಮಿತಿಯನ್ನು (Gross Annual Income) ರೂ.4.50 ಲಕ್ಷದಿಂದ ರೂ.6.00 ಲಕ್ಷಕ್ಕೆ ಹೆಚ್ಚಿಸಿದೆ. ಹಿಂದುಳಿದ ವರ್ಗಗಳ ಪ್ರವರ್ಗ 2ಎ, 2ಬಿ, 3ಎ, ಮತ್ತು 3ಬಿ ಪ್ರವರ್ಗದ ಅಭ್ಯರ್ಥಿ ಮತ್ತು ಅವರ ತಂದೆ-ತಾಯಿಯ ಒಟ್ಟು ವಾರ್ಷಿಕ ಆದಾಯ ಮಿತಿ ರೂ.6.00 ಲಕ್ಷ ಆಗಿದ್ದಲ್ಲಿ ಅಂತಹ ಅಭ್ಯರ್ಥಿಗಳು ಮೀಸಲಾತಿ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ.

3) ಪರಿಶಿಷ್ಟ ಜಾತಿ (ಎಸ್.ಸಿ), ಪರಿಶಿಷ್ಟ ಪಂಗಡ (ಎಸ್.ಟಿ) ಮತ್ತು ಪ್ರವರ್ಗ-1 ಹಾಗೂ ಗ್ರಾಮೀಣ ಗುಂಪಿನ ಸೌಲಭ್ಯಕ್ಕೆ ಕರ್ನಾಟಕ ಅಭ್ಯರ್ಥಿಗಳು ಮಾತ್ರ ಅರ್ಹರಾಗಿರುತ್ತಾರೆ.